**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು
ಸತ್ರ ಮೊಕದ್ದಮೆ ನಂಃ 87 /2021

ಸಾಕ್ಷಿದಾರರ ಹೆಸರು - ಮಂಜುನಾಥ.ಬಿ.ಎಸ್. ಪಿಡಬ್ಲೂ - 22
ತಂದೆಯ ಹೆಸರು - ಬಿ.ಎಂ. ಸುಂದರರಾಜ್ ಸಿಡಬ್ಲೂ - 30
ವಯಸ್ಸು - 43 ವರ್ಷ
ಉದ್ಯೋಗ - ಪಿ.ಐ., ಡಿ.ಸಿ.ಆರ್.ಇ. ಘಟಕ ಬೆಂಗಳೂರು
ವಾಸ ಸ್ಥಳ - ಬೆಂಗಳೂರು

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ* ***jitsi app*** *ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 15.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ನಾನು ದಿನಾಂಕಃ 01-11-2018 ರಿಂದ 26-04-2022 ರವರೆಗೆ ಕಡೂರು ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 11-01-2021 ರಂದು ಸಂಜೆ ಸುಮಾರು 4.30 ಗಂಟೆಗೆ ಚಾಸಾ.28 ರವರು ನನಗೆ ದೂರವಾಣಿ ಕರೆ ಮಾಡಿ ಮಾಚಗೊಂಡನಹಳ್ಳಿ ಗ್ರಾಮದಲ್ಲಿ ತಮ್ಮಯ್ಯ ಎಂಬ ವ್ಯಕ್ತಿ ಕೊಲೆಯಾಗಿರುವುದಾಗಿ ಮಾಹಿತಿ ನೀಡಿದರು. ನಂತರ ಸಂಜೆ ಸುಮಾರು 6.30 ಗಂಟೆಗೆ ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ

ನೀಡಿದೆನು. ಮಾಚಗೊಂಡನಹಳ್ಳಿ ಗ್ರಾಮದ ಸರ್ಕಾರಿ ಶಾಲೆಯ ಹಿಂಭಾಗದ ಒಂದು ಓಣಿಯಲ್ಲಿ ತಮ್ಮಯ್ಯ ಎಂಬ ವ್ಯಕ್ತಿಯ ಮೃತ ದೇಹ ಬಿದ್ದಿತ್ತು. ನಾನು ಸದರಿ ಸ್ಥಳದ ಛಾಯ ಚಿತ್ರಗಳನ್ನು ತೆಗೆದು ಶವವನ್ನು ಚಿಕ್ಕಮಗಳೂರಿನ ಎಂ.ಜಿ. ಆಸ್ಪತ್ರೆಯ ಶವಗಾರಕ್ಕೆ ರವಾನಿಸಿರುತ್ತೇನೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.7 ಮತ್ತು 8 ಎಂದು ಗುರುತಿಸಲಾಗಿರುತ್ತದೆ. ಸದರಿ ಸ್ಥಳದಲ್ಲಿ ಫ್ರಾಸಾ.19 ರವರಿಂದ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ. ಸದರಿ ಸ್ಥಳವನ್ನು ಸಂರಕ್ಷಿಸಲು ಸಿಬ್ಬಂದಿಯನ್ನು ನೇಮಿಸಿರುತ್ತೇನೆ ಮತ್ತು ಚಾಸಾ.28 ರವರನ್ನು ಆರೋಪಿಯ ಪತ್ತೆಯ ಕಾರ್ಯಕ್ಕೆ ನೇಮಿಸಿ ನಾನು ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಹೋದೆನು. ನಾನು ಸದರಿ ಠಾಣೆಯಲ್ಲಿದ್ದ ಸಮಯದಲ್ಲಿ ಚಾಸಾ.28 ಮತ್ತು ಸಿಬ್ಬಂದಿಯವರು ಆರೋಪಿ ಸತೀಶನನ್ನು ದೇವನೂರು ರೈಲ್ವೆ ನಿಲ್ದಾಣದಲ್ಲಿ ವಶಕ್ಕೆ ಪಡೆದು ರಾತ್ರಿ 7.45 ಗಂಟೆಗೆ ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ಆರೋಪಿಯನ್ನು ದಸ್ತಗಿರಿ ಕ್ರಮ ಅನುಸರಿಸಿ ಬಂಧಿಸಿ ಆತನನ್ನು ವಿಚಾರಣೆಗೆ ಒಳಪಡಿಸಿ ಆತನ ಸ್ವಇಚ್ಛಾ ಹೇಳಿಕೆಯನ್ನು ರಾತ್ರಿ 8.30 ರಿಂದ 9.00 ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ. ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ "ನನ್ನೊಂದಿಗೆ ಬಂದರೆ ನಾನು ನನ್ನ ತಂದೆಯನ್ನು ಕೊಲೆ ಮಾಡಿದ ಸ್ಥಳ ಕೊಲೆಗೆ ಬಳಸಿದ ಕಲ್ಲು ಹಾಗೂ ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಬಟ್ಟೆಗಳು ರಕ್ತವಾಗಿದ್ದು ಅವುಗಳನ್ನು ಹಾಜರು ಪಡಿಸುತ್ತೇನೆ" ಎಂದು ತಿಳಿಸಿರುತ್ತಾನೆ. ಆರೋಪಿಯ ಸ್ವಇಚ್ಛಾ ಹೇಳಿಕೆಯ ಸದರಿ ಭಾಗವನ್ನು ನಿಪಿ.45 ಎಂದು ಗುರುತಿಸಲಾಯಿತು.

3. ನಂತರ ಆರೋಪಿಯ ಸ್ವಇಚ್ಛಾ ಹೇಳಿಕೆಯ ಮೇರೆಗೆ ಪಂಚನಾಮೆಯನ್ನು ಕೈಗೊಳ್ಳುವ ಸಲುವಾಗಿ ಪ್ರಾಸಾ.8 ಮತ್ತು 11 ರವರನ್ನು ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಬರಮಾಡಿಕೊಂಡು ಅವರಿಗೆ ಪಂಚರಾಗಿ ಸಹಕರಿಸುವಂತೆ ಕೋರಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸದರಿ ನೋಟೀಸನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.16 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.16(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚರ ಸಮಕ್ಷಮ ಆರೋಪಿಯು ಆತ ದಿನ ತಾನು ಧರಿಸಿದ್ದ ಬಟ್ಟೆಗಳನ್ನೇ ತಾನು ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದಾಗಿ ನುಡಿದು ಅವುಗಳನ್ನು ಹಾಜರು ಪಡಿಸಿದ ಮೇರೆಗೆ ನಾನು ಆತನಿಗೆ ತೊಡಲು ಬೇರೆ ಬಟ್ಟೆಗಳನ್ನು ನೀಡಿರುತ್ತೇನೆ. ಆರೋಪಿ ಹಾಜರು ಪಡಿಸಿದ ಬಟ್ಟೆಗಳನ್ನು ಪರಿಶೀಲಿಸಲಾಗಿ ಅವುಗಳ ಪೈಕಿ ಒಂದು ತಿಳಿ ಹಳದಿ ಬಣ್ಣದ ತುಂಬು ತೋಳಿನ ಕಾಟನ್ ಶರ್ಟು ಆಗಿದ್ದು, ಅದರಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂತು. ಒಂದು ಬೂದು ಬಣ್ಣ ಟೆರಿಕಾಟ್ ಪ್ಯಾಂಟು, ಅದರಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂತು. ಸದರಿ ಬಟ್ಟೆಗಳನ್ನು ಪ್ರತ್ಯೇಕವಾಗಿ ಎನವಲಪ್ ನಲ್ಲಿ ಹಾಕಿ 'P' ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಮಕ್ಷಮ ಅಮಾನತು ಪಡಿಸಿಕೊಂಡಿರುತ್ತೇನೆ. ಆ ಬಗ್ಗೆ ಠಾಣೆಯಲ್ಲಿ ರಾತ್ರಿ 9.15 ರಿಂದ 10 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.17 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.17(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಮೇಲೆ ಹೇಳಿದ ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಸದರಿ ಶರ್ಟು ಮತ್ತು ಪ್ಯಾಂಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು

ಈಗಾಗಲೇ ಮುದ್ದೆಮಾಲು 6 ಮತ್ತು 7 ಎಂದು ಗುರುತಿಸಲಾಗಿರುವ ಶರ್ಟು ಮತ್ತು ಪ್ಯಾಂಟನ್ನು ನೋಡಿ ಆ ದಿನ ಆರೋಪಿ ಹಾಜರು ಪಡಿಸಿದ ಬಟ್ಟೆಗಳು ಅವೇ ಎಂದು ನುಡಿದಿರುತ್ತಾರೆ. ಸದರಿ ಬಟ್ಟೆಗ್ಗಳನ್ನು ಇಟ್ಟ ಎನವಲಪ್ ನ ಮೇಲೆ ನನ್ನ ಮತ್ತು ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಿರುತ್ತೇನೆ. ಮು.ಮಾ.6 ಮತ್ತು 7 ರ ಮೇಲೆ ಅಂಟಪಿಸಿರುವ ಚೀಟಿಗಳ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.6(ಸಿ) ಮತ್ತು ಮು.ಮಾ.7(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ಫೋಟೋಗಳನ್ನು ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ.18 ಮತ್ತು 19 ಎಂದು ಗುರುತಿಸಲಾಗಿರುತ್ತದೆ.

4. ನಿಪಿ.17 ಪಂಚನಾಮೆಯ ಕಾಲಕ್ಕೆ ಅಮಾನತು ಪಡಿಸಿಕೊಂಡ ಮುದ್ದೆಮಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 6/**2021** ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.**46** ಎಂದು, ಸಾಕ್ಷಿಯ ನಿಪಿ.**46**(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ಠಾಣೆಯಲ್ಲಿ ಸೂಕ್ತ ಬಂಧನದಲ್ಲಿ ಇರಿಸಿರುತ್ತೇನೆ.

5. ದಿಃ 12-01-2021 ರಂದು ಚಿಕ್ಕಮಗಳೂರು ಎಂ.ಜಿ. ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿಗೆ ಪ್ರಾಸಾ.9 ಮತ್ತು 12 ರವರನ್ನು ಬರಮಾಡಿಕೊಂಡು ಅವರಿಗೆ ಶವ ಪರೀಕ್ಷೆಗೆ ಪಂಚರಾಗಿ ಸಹಕರಿಸುವಂತೆ ಕೋರಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸದರಿ ನೋಟೀಸನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.20 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು

ನಿಪಿ.20(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚರ ಸಮಕ್ಷಮ ಮೃತ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ರವರ ಶವ ಪರೀಕ್ಷೆಯನ್ನು ನಡೆಸಿರುತ್ತೇನೆ. ಆ ಕಾಲಕ್ಕೆ ಮೃತನ ಮೈಮೇಲೆ ಕಂಡು ಬಂದಂತಹ ಗಾಯಗಳನ್ನು ಪಂಚನಾಮೆಯಲ್ಲಿ ನಮೂದು ಮಾಡಿರುತ್ತೇನೆ. ಶವ ಪರಿಕ್ಷೆಯ ಕಾಲಕ್ಕೆ ಫ್ರಾಸಾ.2, 10 ಮತ್ತು 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಫ್ರಾಸಾ.2 ಮತ್ತು ಫ್ರಾಸಾ.10 ರವರು ನಿಪಿ.11 ಹಾಗೂ ನಿಪಿ.23 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ. ಆ ಬಗ್ಗೆ ಬೆಳಗ್ಗೆ 8 ಗಂಟೆಯಿಂದ 10.30 ಗಂಟೆಯವರೆಗೆ ಮೇಲೆ ಹೇಳಿದ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.21 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.21(ಸಿ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲಕ್ಕೆ ಫೋಟೋಗಳನ್ನು ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.5, 6, 9 ಮತ್ತು 10 ಎಂದು ಗುರುತಿಸಲಾಗಿರುತ್ತದೆ.

6. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ತೆರಳಿರುತ್ತೇನೆ. ಸದರಿ ಸ್ಥಳದಲ್ಲಿ ಹಾಜರಿದ್ದ ಫ್ರಾಸಾ.1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಲು ಸ್ಥಳಕ್ಕೆ ಫ್ರಾಸಾ.13 ಮತ್ತು 14 ರವರನ್ನು ಬರಮಾಡಿಕೊಂಡು ಅವರಿಗೆ ಪಂಚರಾಗಿ ಸಹಕರಿಸುವಂತೆ ಕೋರಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸದರಿ ನೋಟೀಸನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.24 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.24(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚರ ಸಮಕ್ಷಮ ಫ್ರಾಸಾ.1 ರವರು ಮೃತನ ಮನೆಯ ಎದುರಿಗೆ ಸ್ಥಳವನ್ನು ತೋರಿಸಿ

ಸ್ಥಳದಲ್ಲಿ ಬಿದ್ದಿದ್ದ ಕಲ್ಲನ್ನು ಆರೋಪಿ ಎತ್ತಿಕೊಂಡು ತನ್ನ ತಂದೆಯನ್ನು ಓಡಿಸಿಕೊಂಡು ಹೋಗಿದ್ದಾಗಿ ತಿಳಿಸಿರುತ್ತಾರೆ. ಸದರಿ ಸ್ಥಳದಲ್ಲಿ ಮಧ್ಯಾಹ್ನ 12 ಗಂಟೆಯಿಂದ 1 ಗಂಟೆಯವರೆಗೆ ಮೇಲೆ ಹೇಳಿದ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲದಲ್ಲಿ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ ಮತ್ತು ಫೋಟೋಗಳನ್ನು ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.3 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ನಿಪಿ.2 ಕ್ಕೆ ಪಂಚರ ಮತ್ತು ಫ್ರಾಸಾ.1 ರವರ ಸಹಿ ಪಡೆದಿರುತ್ತೇನೆ.

7. ಅದೇ ದಿನ ಫ್ರಾಸಾ.5 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಲು ಸದರಿ ಸ್ಥಳಕ್ಕೆ ಫ್ರಾಸಾ.13 ಮತ್ತು 14 ರವರನ್ನು ಬರಮಾಡಿಕೊಂಡಿರುತ್ತೇನೆ. ಫ್ರಾಸಾ.5 ರವರು ಮಾಚಗೊಂಡನಹಳ್ಳಿ ಗ್ರಾಮದ ಪ್ರಾಥಮಿಕ ಸರ್ಕಾರಿ ಶಾಲೆಯ ಹಿಂಭಾಗದಲ್ಲಿ ಗಜೇಂದ್ರ ಎಂಬುವವರ ವಾಸದ ಮನೆಯ ಮುಂಭಾಗದಲ್ಲಿದ್ದ ಒಂದು ಓಣಿಯನ್ನು ತೋರಿಸಿ ಆರೋಪಿ ತನ್ನ ತಂದೆ ತಮ್ಮಯ್ಯ ಅಲಿಯಾಸ್ ತಮ್ಮೇಗೌಡರವರನ್ನು ಓಡಿಸಿಕೊಂಡು ಬಂದು ಕಲ್ಲಿನಿಂದ ಆತನ ತಲೆಯನ್ನು ಜಜ್ಜಿ ಕೊಲೆ ಮಾಡಿದ ಸ್ಥಳ ಅದೇ ಎಂದು ತಿಳಿಸಿರುತ್ತಾನೆ. ಸದರಿ ಸ್ಥಳವನ್ನು ಪರಿಶೀಲಿಸಲಾಗಿ ಅಲ್ಲಿ ರಕ್ತದ ಕಲೆಗಳಾಗಿದ್ದ ಎರಡು ಹಿಡಿಗಾತ್ರದ ಒಂದು ಕಾಡುಜಾತಿಯ ಕಲ್ಲು ಬಿದ್ದಿರುವುದು ಕಂಡು ಬಂತು. ಸದರಿ ಕಲ್ಲಿನ ಮೂರು ಕಡೆ ಚೂಪಾಗಿರುವುದು ಕಂಡು ಬಂತು. ಸದರಿ ಕಲ್ಲನ್ನು ಮತ್ತು ಸದರಿ

ಸ್ಥಳದಲ್ಲಿ ಬಿದ್ದಿದ್ದ ರಕ್ತಮಿಶ್ರಿತ ಮಣ್ಣು ಮತ್ತು ರಕ್ತವಿರದ ಸಾದಾ ಮಣ್ಣನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ 'P' ಎಂಬ ಅಕ್ಷರದಿಂದ ಸೀಲ್ ಮಾಡಿ ಮೇಲೆ ಹೇಳಿದ ಪಂಚರ ಸಮಕ್ಷಮ ಅಮಾನತು ಪಡಿಸಿಕೊಂಡಿರುತ್ತೇನೆ ಮತ್ತು ಅವುಗಳ ಮೇಲೆ ಪಂಚರ ಮತ್ತು ನನ್ನ ಸಹಿಗಳು ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ಆ ಬಗ್ಗೆ ಸದರಿ ಸ್ಥಳದಲ್ಲಿ ಮಧ್ಯಾಹ್ನ 1.15 ಗಂಟೆಯಿಂದ 2.30 ಗಂಟೆಯವರೆಗೆ ಮೇಲೆ ಹೇಳಿದ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.25 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.25(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲದಲ್ಲಿ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ ಮತ್ತು ಫೋಟೋಗಳನ್ನು ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.26 ಮತ್ತು 27 ಎಂದು ಗುರುತಿಸಲಾಗಿರುತ್ತದೆ. ನಿಪಿ.25 ಕ್ಕೆ ಪಂಚರ ಮತ್ತು ಫ್ರಾಸಾ.5 ರವರ ಸಹಿ ಪಡೆದಿರುತ್ತೇನೆ.

8. ನಿಪಿ.25 ಪಂಚನಾಮೆಯ ಕಾಲಕ್ಕೆ ಅಮಾನತು ಪಡಿಸಿಕೊಂಡ ಮುದ್ದೆಮಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 7/**2021** ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.**47** ಎಂದು, ಸಾಕ್ಷಿಯ ನಿಪಿ.**47**(ಎ) ಎಂದು ಗುರುತಿಸಲಾಯಿತು. ಸದರಿ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.8 ರಿಂದ 10 ಎಂದು ಗುರತಿಸಲ್ಪಟ್ಟಿರುವ ಕಲ್ಲು, ರಕ್ತಮಿಶ್ರಿತ ಮಣ್ಣು ಮತ್ತು ಸಾದಾ ಮಣ್ಣನ್ನು ನೋಡಿ

ಗುರುತಿಸಿ ಪಂಚನಾಮೆಯ ಕಾಲದಲ್ಲಿ ಅಮಾನತು ಪಡಿಸಿಕೊಂಡ ಮಾಲುಗಳು ಅವೇ ಎಂದು ನುಡಿದಿರುತ್ತಾರೆ. ಮು.ಮಾ.8 ರಿಂದ 10 ರ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.8(ಬಿ), ಮು.ಮಾ.9(ಬಿ) ಮತ್ತು ಮು.ಮಾ.10(ಬಿ) ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಆತನನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

9. ದಿಃ 13-01-2021 ರಂದು ಸಾಕ್ಷಿದಾರರಾದ ಪ್ರಾಸಾ.10 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಪ್ರಾಸಾ10 ರವರು ನನ್ನ ಮುಂದೆ ನಿಪಿ.22 ರಂತೆ ಹೇಳಿಕೆಯನ್ನು ನೀಡಿರುತ್ತಾರೆ. ಅದೇ ದಿನ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡುವಂತೆ ಚಾಸಾ.17 ರವರೆಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಮತ್ತು ಚಾಸಾ.23 ರವರಿಗೆ ಕೃತ್ಯ ನಡೆದ ಸ್ಥಳದ ಅಸೆಸಮೆಂಟ್ ಪ್ರತಿಯನ್ನು ನೀಡಲು ಮನವಿಯನ್ನು ಸಲ್ಲಿಸಿರುತ್ತೇನೆ. ಸದರಿ ಮನವಿಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ.48 ಮತ್ತು ಪಿ.49 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.48(ಎ) ಮತ್ತು ಪಿ.49(ಎ) ಎಂದು ಗುರುತಿಸಲಾಯಿತು.

10. ದಿಃ 16-01-2021 ರಂದು ಪ್ರತ್ಯಕ್ಷ ಸಾಕ್ಷಿಯಾದ ಚಾಸಾ.5 ರವರ ಹೇಳಿಕೆಯನ್ನು ಸಿ.ಆರ್.ಪಿ.ಸಿ ಕಲಂ 164 ರಡಿಯಲ್ಲಿ ದಾಖಲಿಸಲು ಪ್ರಾಸಾ.18 ರವರ ಮುಖಾಂತರ ಕಡೂರಿನ 2 ನೇ ಸಿವಿಲ್ ಹೆಚ್ಚುವರಿ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಮನವಿ ಪತ್ರದೊಂದಿಗೆ ಕಳುಹಿಸಿ ಕೊಟ್ಟಿರುತ್ತೇನೆ. ಅದರಂತೆ ಸದರಿ ನ್ಯಾಯಾಧೀಶರು ಪ್ರಾಸಾ.5 ರವರ ಹೇಳಿಕೆಯನ್ನು ದಾಖಲಿಸಿದ್ದು

ಅದರ ಪ್ರತಿಯನ್ನು ದಿಃ 22-01-2021 ರಂದು ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ.50 ಎಂದು ಗುರುತಿಸಲಾಯಿತು.

11. ಅದೇ ದಿನ ಪ್ರಾಸಾ.15 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯು ಬಳಸುತ್ತಿದ್ದ ಮೊಬೈಲ್ ಸಂಖ್ಯೆ 8792061449 ಗೆ ಸಂಬಂಧಿಸಿದ ಕಸ್ಟಮರ್ ಆಪ್ಲಿಕೇಷನ್ ಫಾರಂ ಮತ್ತು ಕಾಲ್ ವಿವರಗಳ ವರದಿಯನ್ನು ಸಂಬಂಧಿಸಿದವರಿಂದ ದೊರಕಿಸಿಕೊಡುವಂತೆ ಚಿಕ್ಕಮಗಳೂರಿನ ಜಿಲ್ಲಾ ವರಿಷ್ಟಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಸದರಿ ಮನವಿಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ.51 ಮತ್ತು ಪಿ.52 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.51(ಎ) ಮತ್ತು ಪಿ.52(ಎ) ಎಂದು ಗುರುತಿಸಲಾಯಿತು.

12. ದಿಃ 22-01-2021 ರಂದು ಚಾಸಾ.19 ರವರು ಮೃತನ ಮರಣೋತ್ತರ ಪರೀಕ್ಷಾ ವರದಿಯನ್ನು ವೈದ್ಯಾಧಿಕಾರಿಗಳಿಂದ ತಂದು ಹಾಜರು ಪಡಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.40 ಎಂದು ಗುರುತಿಸಲಾಗಿರುತ್ತದೆ. ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷಾ ಕಾಲದಲ್ಲಿ ಸಂಗ್ರಹಿಸಿದ್ದ ವಸ್ತುಗಳನ್ನು ಪಡೆದು ಸದರಿ ವರದಿಯೊಂದಿಗೆ ಚಾಸಾ.19 ರವರು ಹಾಜರು ಪಡಿಸಿರುತ್ತಾರೆ. ಅವುಗಳನ್ನು ಅಮಾನತು ಪಡಿಸಿಕೊಳ್ಳುವ ಸಲುವಾಗಿ ಪಂಚರಾದ ಪ್ರಾಸಾ.3 ಮತ್ತು 12 ರವರನ್ನು ಬರಮಾಡಿಕೊಂಡು ಅವರಿಗೆ ಪಂಚರಾಗಿ ಬರಲು ನೋಟೀಸನ್ನು ನೀಡಿರುತ್ತೇನೆ. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.12 ಎಂದು

ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 12(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚರ ಸಮಕ್ಷಮ ಚಾಸಾ.19 ರವರು ಹಾಜರು ಪಡಿಸಿದ ಮೃತರ ಮರಣೋತ್ತರ ಪರೀಕ್ಷಾ ಕಾಲದಲ್ಲಿ ಸಂಗ್ರಹಿಸಿದ ವಸ್ತುಗಳನ್ನು ಸಂಜೆ 5.30 ರಿಂದ 6 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತು ಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.13 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.13(ಸಿ) ಎಂದು ಗುರುತಿಸಲಾಯಿತು.

13. ನಿಪಿ.13 ಪಂಚನಾಮೆಯ ಕಾಲಕ್ಕೆ ಅಮಾನತು ಪಡಿಸಿಕೊಂಡ ಮುದ್ದೆಮಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 8/**2021** ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.**53** ಎಂದು, ಸಾಕ್ಷಿಯ ನಿಪಿ.**53**(ಎ) ಎಂದು ಗುರುತಿಸಲಾಯಿತು.

14. ದಿಃ 03-02-2021 ರಂದು ನಿಪಿ.53 ರ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿದ್ದ ಮುದ್ದೆಮಾಲುಗಳನ್ನು ಚಾಸಾ.19 ರವರ ಮೂಲಕ ಮಂಗಳೂರಿನ ಆರ್.ಎಫ್.ಎಸ್.ಎಲ್. ಗೆ ವೈಜ್ಞಾನಿಕ ಪರೀಕ್ಷೆಗಾಗಿ ಮನವಿಯೊಂದಿಗೆ ಕಳುಹಿಸಿ ಕೊಟ್ಟಿರುತ್ತೇನೆ. ಅದೇ ದಿನ ಚಾಸಾ.23 ರವರಿಂದ ಕೃತ್ಯ ನಡೆದ ಸ್ಥಳಕ್ಕೆ ಸಂಬಂಧಿಸಿದ ಅಸೆಸಮೆಂಟ್ ರಿಜಿಸ್ಟರ್ ನ ದೃಢೀಕೃತ ಪ್ರತಿಯನ್ನು ಸ್ವೀಕರಿಸಿರುತ್ತೇನೆ. ಸದರಿ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.35 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.35(ಎ) ಎಂದು ಗುರುತಿಸಲಾಯಿತು.

15. ದಿಃ 04-02-2021 ರಂದು ಚಾಸಾ.27 ರವರಿಂದ ಇ-ಮೇಲ್ ಮೂಲಕ ಮೇಲೆ ಹೇಳಿದ ಆರೋಪಿಯ ಮೊಬೈಲ್ ಸಂಖ್ಯೆ

8792061449 ಗೆ ಸಂಬಂಧಿಸಿದ ಕಾಲ್ ವಿವರಗಳ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.43 ಎಂದು ಗುರುತಿಸಲಾಗಿರುತ್ತದೆ.

16. ಅದೇ ದಿನ ಕಡೂರಿನ ಹೆಚ್.ಡಿ.ಎಫ್.ಸಿ. ಬ್ಯಾಂಕಿಗೆ ಭೇಟಿ ನೀಡಿ ಸದರಿ ಬ್ಯಾಂಕಿನಲ್ಲಿ ಮೃತ ತಮ್ಮಯ್ಯರವರು ತನ್ನ ಹೆಸರಿನಲ್ಲಿ ಟ್ರ್ಯಾಕ್ಟರ್ ಖರೀದಿಸಲು ಲೋನ್ ನ್ನು ಪಡೆದುಕೊಂಡಿದ್ದ ಬಗ್ಗೆ ಮತ್ತು ಬಾಕಿ ಉಳಿದಿದ್ದ ಸಾಲದ ಹಣದ ಬಗ್ಗೆ ಮಾಹಿತಿಯನ್ನು ನೀಡುವಂತೆ ಸದರಿ ಬ್ಯಾಂಕಿನ ಮ್ಯಾನೇಜರ್ ರಾದ ಫ್ರಾಸಾ.16 ರವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಸದರಿ ಮನವಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.29 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸೇವಕರ ಹುದ್ದೆಯ ಸಂದರ್ಶನ ಮಧ್ಯಾಹ್ನ 3.00 ಗಂಟೆಗೆ ಇರುವುದರಿಂದ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ